Reg. No. 

# BASKALN 301/HRDKALN 301/BSWKALN 301/BVAKALN 301

## III Semester B.A./B.A.(HRD)/B.S.W./B.V.A. Examination, February/March 2023
## (NEP – 2020) (2022 – 23 Batch Onwards)
## KANNADA LANGUAGE

Time : 2 Hours　　　　Max. Marks : 60

I. ಕೆಳಗಿನ **ಮೂರು** ಪ್ರಶ್ನೆಗಳಿಗೆ ಉತ್ತರಿಸಿರಿ : **(3×8=24)**

1) ಚಂದ್ರಮತಿಯ ಪತಿನಿಷ್ಠೆ ಹಾಗೂ ಸ್ವಾಮಿನಿಷ್ಠೆಯು ರಾಘವಾಂಕನ ಕಾವ್ಯಭಾಗದಲ್ಲಿ ಮೂಡಿಬಂದ ಬಗೆಯನ್ನು ವಿವರಿಸಿರಿ.

**ಅಥವಾ**

ಏಸುವನ್ನು ಶಿಲುಬೆಗೇರಿಸುವ ಸಂದರ್ಭವು 'ಗೊಲ್ಗೊಥಾ' ಕಾವ್ಯಭಾಗದಲ್ಲಿ ಹೇಗೆ ಮೂಡಿಬಂದಿದೆ ? ವಿವರಿಸಿರಿ.

2) ಮನೆಯವರೆಗೆ ಹಾದಿ ಮಾಡಲು ವಾಸ್ತೇವನು ಪಟ್ಟಂತಹ ಶ್ರಮ ಹಾಗೂ ಅದರಿಂದ ಎದುರಾದ ಸವಾಲುಗಳನ್ನು ವಿವರಿಸಿರಿ.

**ಅಥವಾ**

'ತಾಯಿಯ ಆಸೆ' ಲೇಖನದಲ್ಲಿ ಮಗಳ ಮಾನಸಿಕ ತೊಳಲಾಟ ಹಾಗೂ ಅದರಿಂದ ಆಕೆಯು ಹೊರಬರಲು ಸಾಧ್ಯವಾದ ಸನ್ನಿವೇಶದ ಕುರಿತು ವಿವರಿಸಿರಿ.

3) ರಾವಣನು ಸ್ವಪ್ನದಲ್ಲಿ ಕಂಡ ಸೀತೆಯ ಕುರಿತು ಬರೆಯಿರಿ.

**ಅಥವಾ**

ರಾವಣನ ಮನಸ್ಸು ಪರಿವರ್ತನೆಗೊಂಡ ಹಿನ್ನೆಲೆಯನ್ನು ವಿವರಿಸಿರಿ.

II. ಕೆಳಗಿನ **ಮೂರು** ಪ್ರಶ್ನೆಗಳಿಗೆ ಉತ್ತರಿಸಿರಿ : **(3×5=15)**

1) ರತ್ನಾಕರವರ್ಣಿಯು ಸೂಚಿಸಿದ ದೇಹ, ಆತ್ಮ ಮತ್ತು ಪರಮಾತ್ಮಗಳ ಕುರಿತಾದ ವಿಚಾರಗಳನ್ನು ವಿವೇಚಿಸಿರಿ.

**ಅಥವಾ**

'ಕರ್ಫ್ಯೂ' ಕವನದ ಆಶಯವನ್ನು ವಿವರಿಸಿರಿ.

P.T.O.

2) ಭಾವಚಿತ್ರಗಳು ಜನರ ಮನೋಲೋಕವನ್ನು ವಿಸ್ತರಿಸುವ ಎಳೆಗಳಂತೆ ಕಾರ್ಯನಿರ್ವಹಿಸುತ್ತವೆ ಎಂಬ ವಿಚಾರವು ಲೇಖನದಲ್ಲಿ ಹೇಗೆ ಮೂಡಿಬಂದಿದೆ ? ವಿವರಿಸಿರಿ.

**ಅಥವಾ**

ಅಸಲಿ–ನಕಲಿ, ಅಸ್ಮಿತೆ, ಕುಂಭದ್ರೋಣ – ಈ ಪದಗಳ ವೈಶಿಷ್ಟ್ಯಗಳ ಕುರಿತಾಗಿ ಪ್ರೊ. ವೆಂಕಟಸುಬ್ಬಯ್ಯ ಅವರ ಅಭಿಪ್ರಾಯಗಳನ್ನು ಬರೆಯಿರಿ.

3) ರಾವಣ–ಮಂಡೋದರಿಯರ ಬಾಂಧವ್ಯವು 'ದಶಾನನ ಸ್ವಪ್ನ ಸಿದ್ಧಿ' ಕಾವ್ಯಭಾಗದಲ್ಲಿ ಮೂಡಿಬಂದ ಬಗೆಯನ್ನು ವಿವರಿಸಿರಿ.

**ಅಥವಾ**

'ದಶಾನನ ಸ್ವಪ್ನ ಸಿದ್ಧಿ' ಕಾವ್ಯಭಾಗದಲ್ಲಿ ಕುವೆಂಪು ಅವರ ಆಶಯವು ಹೇಗೆ ಪ್ರಕಟಗೊಂಡಿದೆ ? ವಿವರಿಸಿರಿ.

III. ಕೆಳಗಿನ **ಒಂದು** ಪದ್ಯಭಾಗದ ಸಂದರ್ಭ ಸೂಚಿಸಿ ಸ್ವಾರಸ್ಯವನ್ನು ಬರೆಯಿರಿ. **(1×5=5)**

1) ಎನ್ನ ದುಷ್ಕರ್ಮ ವಶದಿಂದಾದ ಕರ್ಮವೆಂ
ದಿನ್ನೆಗಂ ಬಗೆದೆತಾನಿಂದುತನಕಂ ಕಡೆಗೆ
ನಿನ್ನ ಗೊಡ್ಡಾಟವೇ ಹೊಲೆಯನಾದವನಿನ್ನು
ಸತಿಗಿತಿಯ ಕೊಲೆಗೆ ಹೇಸಿ
ಬೆನ್ನೀವೆನೇ ಇದಂ ತೋಱಿ ಸಿಕ್ಕಿಸಿಬಂದ
ಗನ್ನಗತಕಕ್ಕೆ ಸೆಡೆವೆನೆ ಸಡಿಫಡೆನುತಾರ್ದು
ನನ್ನಿಕಾಱಿಂ ವಧುವನೆಲೆಲೆ ಶಿವಶಿವ
ಮಹಾದೇವ ಹೊಡೆದಂ ಹೊಡೆದನು

2) ನಿಮ್ಮಪ್ಪನ್ಹಾಂಗ ನಾ ಸೋಗು ಮಾಡಿ
ಜೋಗಪ್ಪನಾಗಲೇನ
ಹಾಸಿದಷ್ಟರಲೆ ಕಾಲು ಚಾಚಿ ನೀ
ಬಾಳಲಾರಿಯೇನ

IV. ಕೆಳಗಿನವುಗಳಲ್ಲಿ **ಎರಡರ** ಸಂದರ್ಭ ಸೂಚಿಸಿ ಸ್ವಾರಸ್ಯವನ್ನು ಬರೆಯಿರಿ. **(2×4=8)**

1) ಅನ್ಯರಂ ರಕ್ಷಿಸಿದಿವಂ ತನ್ನ ತಾನೆ ರಕ್ಷಿಸಲಾರನಾದನೆ ?

2) ಸುಜ್ಞಾನದಿಂ ಪೊಳ್ದಿರ್ಪಂ ಶಿವನಾಗಿಯೇ ಚದುರನೋ !

3) ಹರೆಯದ ಹುಡುಗಿ ನುಡಿಸುತಿರೆ ಪಂಥವಾಡದ ಜವ್ವನಿಗನುಂಟೆ.

4) ಬಾಯಿಲ್ಲದವನ ಕೂಗಿಗೆ ಕಂಚಿನ ಕಂಠ ಎರವಲು ಸಿಕ್ಕಿದೆ.

V. ಕೆಳಗಿನ ಪ್ರಶ್ನೆಗಳಿಗೆ ವಾಕ್ಯರೂಪದಲ್ಲಿ ಉತ್ತರಿಸಿರಿ : **(8×1=8)**

1) ರಾಘವಾಂಕನಿಗಿರುವ ಬಿರುದು ಯಾವುದು ?

2) ರತ್ನಾಕರವರ್ಣಿಯು ಸಾಂಗತ್ಯದಲ್ಲಿ ಬರೆದಿರುವ ಕೃತಿ ಯಾವುದು ?

3) ಮಾಸ್ತಿಯವರ ಕಾವ್ಯನಾಮ ಯಾವುದು ?

4) ವೈದೇಹಿಯವರ ಮೂಲ ಹೆಸರೇನು ?

5) 'ಮನಸ್ಸು ಇಲ್ಲದ ಮಾರ್ಗ' ಕೃತಿಯ ಕರ್ತೃ ಯಾರು ?

6) 'ಇರಾದೆ' ಎನ್ನುವುದು ಯಾವ ಭಾಷೆಯಿಂದ ಬಂದ ಪದವಾಗಿದೆ ?

7) ಕುವೆಂಪು ಅವರು ಬರೆದಿರುವ ಒಂದು ಕಾದಂಬರಿಯನ್ನು ಹೆಸರಿಸಿರಿ.

8) ಮೈಥಿಲಿ ಎಂದರೆ ಯಾರು ?

---